ಓ. ಎಸ್. ನಂಃ 116/2019

ಪಿ . ಡಬ್ಲ್ಯೂಃ 3

ದಿಃ 14-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ. ಎಸ್ ಜೆ. ಪ್ರತಿವಾದಿ ಪರ ವಕೀಲರಿಂದ ಃ

ಗುರಪಾದಪ್ಪ ಚನ್ನಬಸಪ್ಪ ನನ್ನ ಕಾಕ. ವಾದಿ ನನ್ನ ಕಾಕನ ಮಗ. ಪ್ರತಿವಾದಿ ನನ್ನ ಕಾಕನ ಮಗ. ವಾದಿಗೆ 03 ಎಕರೆ 27 ಗುಂಟೆ ಜಮೀನು ಇದೆ. ಪ್ರತಿವಾದಿಯರದ್ದು 03 ಎಕರೆ 26 ಗುಂಟೆ ಇದೆ. ಪ್ರತಿವಾದಿ ಮಾರಾಟ ಮಾಡಿದ ಬಗ್ಗ ಮಾಹಿತಿ ಇಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ವಕೀಲರು ಮಾಹಿತಿ ಕೊಟ್ಟಿದ್ದಾರೆ. ನಾನು ಚಕಬಂದಿ ಹೇಳಿ ಬರೆಸಿಲ್ಲ. ಈ ದಾವೆಗೆ ಎಷ್ಟು ಆಸ್ತಿಯ ಮೇಲೆ ಮಾಡಿದ್ದಾರೆ ಎಂದು ಮಾಹಿತಿ ಇಲ್ಲ. ಎರಡೂ ಜಮೀನು ರಸ್ತೆಗೆ ಹಚ್ಚಿ ಊರು ಮುಂದೆ ಇದೆ. ಇಬ್ಬರೂ ಗೋವಿನ ಜೋಳ ಬಿತ್ತಿದ್ದಾರೆ . ಈ ವರ್ಷ ಗೋವಿನ ಜೋಳ ಬಿತ್ತಿದ್ದಾರೆ. ಗೋವಿನ ಜೋಳ ಬಿತ್ತಿಲ್ಲ ಪಿಕ ಜಾಲಿ ಇದೆ ಎಂದರೆ ಸರಿ. ಜಮೀನಿನಲ್ಲಿ ಬೋರ ಇದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ನಡುವೆ ಬೋರ ವಿಚಾರಕ್ಕೆ ಜಗಳ ಇದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರು ಸರ್ವೆಯರ್ ಕರೆಸಿ ಅಳತೆ ಮಾಡಿಸಿದ್ದಾರೆ ಎಂದರೆ ಮಾಹಿತಿ ಇಲ್ಲ. ವಾದಿ ಮತ್ತು ಪ್ರತಿವಾದಿಯರು ಎಷ್ಟು ಕ್ಷೇತ್ರ ವಹಿವಾಟು ಮಾಡುತ್ತಾರೆ ಎಂದು ಮಾಹಿತಿ ಇಲ್ಲ ಎಂದರೆ ಸರಿ. ಇಬ್ಬರ ನಡುವೆ ಭಾಗ ಆದ ಬಗ್ಗ ಮಾಹಿತಿ ಇಲ್ಲ ಎಂರದೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಯನ್ನು ನೋಡಿಲ್ಲ ಎಂದರೆ ಸರಿ .

ನನ್ನಂದು 01 ಎಕರೆ 04 ಗುಂಟೆ ಹೊಲ ಇದೆ. ಹೊಲದಲ್ಲಿಏನು ಬೆಳೆದಿದೆ ಎಂದು GPS ಮಾಡುತ್ತಾರೆ ಎಂದರೆ ಸರಿ. GPS ಆಧಾರದ ಮೇಲೆ ಬೆಳೆ ಪರಿಹಾರ ನೀಡುತ್ತಾರೆ ಎಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ . ವಾದಿ ಕರೆಯದಿದ್ದರೂ ನಾನೇ ಬಂದು ಸಾಕ್ಷಿ ಹೇಳುತ್ತಿದ್ದೇನೆ. ನಾನು ವಾದಿ ಪರ ಸುಳ್ಳ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ಓ. ಎಸ್. ನಂಃ 116/2019

ಪಿ . ಡಬ್ಲ್ಯೂಃ 2

ದಿಃ 14-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ. ಎಸ್ ಜೆ. ಪ್ರತಿವಾದಿ ಪರ ವಕೀಲರಿಂದ ಃ

ಸದರಿ ಪ್ರಕರಣದ ಬಗ್ಗೆ ಮಾಹಿತಿ ಇದೆ. ಹೊಲ ಮಾರಲು 11 ಇ ಸೆಕಚ್ ಮಾಡುತ್ತಾರೆ ಎಂದರೆ ಸರಿ . ದಾವಾ ಆಸ್ತಿ 03 ಎಕರೆ 27 ಗುಂಟೆ ಇದೆ. ಪ್ರತಿವಾದಿಯರದ್ದು 03 ಎಕರೆ 26 ಗುಂಟೆ ಇದೆ. ಎರಡು ಜಮೀನು ಹೊಂದಿಕೊಂಡು ಇದೆ ಎಂದರೆ ಸರಿ . ಪ್ರತಿವಾದಿಯರು ಆಸ್ತಿ 03 ಎಕರೆ 26 ಗುಂಟೆಯಲ್ಲಿ 01 ಎಕರೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಎರಡು ಹೊಲಗಳು ಸಧ್ಯ ಬಿಳು ಇದೆ ಎಂದರೆ ಗೋವಿನ ಜೋಳ ಬೆಳೆದಿದ್ದಾರೆ. ಗೋವಿನ ಜೋಳವನ್ನು ನಾಗರಾಜ ಬೆಳೆದಿದ್ದಾರೆ. ಸಾಕ್ಷಿ ಮುಂದುವರೆದು ತಮ್ಮ ತಮ್ಮ ಜಮೀನನಲ್ಲಿ ತಾವು ಬೆಳೆದಿದ್ದಾರೆ. ಸದರಿ ವಿಷಯವನ್ನು ಸುಳ್ಳು ಹೇಳುತಿ2 ದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಾಗವ್ವ ಫಕ್ಕಿರಗೌಡ ಪಾಟೀಲ ಎನ್ನುವವರಿಗೆ 18.02.2019 ರಂದು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಮಾರಾಟವಾದ ನಂತರ ನಾಗವ್ವ ಫಕ್ಕಿರಗೌಡ ಪಾಟೀಲರವರು ವಹಿವಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರ ಜಮೀನು ಒಂದೇ ಏಕ ಜಮೀನು ಇದೆ . ಪ್ರತಿವಾದಿಯರ ಜಮೀನಿನ ನಂಬರ 73/1 ಬ ಇರುತ್ತದೆ. ನಿ.ಪಿ-7 ರಲ್ಲಿ ಎಷ್ಟು ಜಮೀನು ಇದೆ ಎಂದರೆ 02 ಎಕರೆ ಇದೆ. ಪ್ರತಿವಾದಿಯವರು 03 ಎಕರೆ 36 ಗುಂಟೆ ಮೊದಲಿನಿಂದ ಇವತ್ತಿನವರೆಗೂ ವಹಿವಾಟು ಮಾಡುತ್ತಾರೆ. ಈದಿನ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-8 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರ ಜಮೀನಿನ ಚಕಬಂದಿ ಪೂರ್ವಕ್ಕೆ - ಸರಕಾರಿ ರಸ್ತೆ, ಪಶ್ಚಿಮಕ್ಕೆ-ಕೋರಗೊಂಡಿಯವರ ಜಮೀನು, ಉತ್ತರಕ್ಕೆ ಶಂಕರಪ್ಪ, ದಕ್ಷಿಣಕ್ಕೆ- ಈರಪ್ಪ ಕಲಿವಾಳ ಇವರ ಜಮೀನು. ಪ್ರತಿವಾದಿಯವರ ಜಮೀನು ಪೂರ್ವಕ್ಕೆ ಕ್ರಾಸಯಾಗಿ ಇದೆ. ವಾದಿಯರ ಜಮೀನು ರಸ್ತೆಗೆ ಹತ್ತಿಕೊಂಡು ಇರುತ್ತದೆ. ನಾನು ನೋಡಿದ್ದು ಹೇಳುತ್ತೇನೆ. ದಾಖಲಾತಿಗಳನ್ನು ನೋಡಿ ಹೇಳುತ್ತಿಲ್ಲ. ಶಂಕ್ರರಪ್ಪ ನನಗೆ ಬಹಳ

ಬೇಕಾದವನ್ನು ಅಂದರೆ ಇಬ್ಬರೂ ಬೇಕಾದರವರು . ಗೋವಿನ ಜೋಳವನ್ನು ಈ ವರ್ಷ ಬಿತ್ತಿದ್ದಾರೆ. ಗೋವಿನ ಜೋಳವನ್ನು ಬಿತ್ತಿದ್ದರ ಬಗ್ಗೆ G P S ಜೀಪಿಯಸ್ ನಕ್ಷೆ ಮಾಡುತ್ತಾರೆ ಎಂದರೆ ಮಾಡಬಹುದು. ವಾದಿ ಮತ್ತು ಪ್ರತಿವಾದಿಯರು ಬಿತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.